# ಪೋಷಕರ ಆತಂಕ: ನನ್ನ ಭರವಸೆ

**ಸುಪ್ರಿತಾ ನಾರಾಯಣ್**
**ಸ್ಟಾರ್ ಸುವರ್ಣ 'ಸರಸು'ನ ಸರಸ್ವತಿ**



◆ **ನೀವು ಹುಟ್ಟಿ ಬೆಳೆದಿದ್ದು, ಬಣ್ಣ ಹಚ್ಚಿದ್ದು ಹೇಗೆ?**

ಹುಟ್ಟಿ–ಬೆಳೆದಿದ್ದು ಮೈಸೂರು. ಎಂಜಿನಿಯರಿಂಗ್ ಓದಿದೆ. ಬೆಂಗಳೂರಿನಲ್ಲಿ ಪ್ರತಿಷ್ಠಿತ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿದೆ. ಶಾಲಾ ದಿನಗಳಿಂದಲೂ ನನಗೆ ಸಾಂಸ್ಕೃತಿಕ ಚಟುವಟಿಕೆಗಳತ್ತ ಒಲವು ಹೆಚ್ಚಿತ್ತು. ಕಥೆ ಬರೆಯುವ ಹವ್ಯಾಸವೂ ಇದೆ. ಸ್ನೇಹಿತರೊಬ್ಬರು ಕಲರ್ಸ್ ಕನ್ನಡ 'ಸ್ಕ್ರಿಪ್ಟ್ ಬರಗಾರರ ಆಯ್ಕೆಗೆ ಪರೀಕ್ಷೆ ನಡೆಸುತ್ತಿದ್ದಾರೆ. ನೀನೂ ಬರಿ' ಎಂದು ಸಲಹೆ ನೀಡಿದರು. ವಾರಾಂತ್ಯ ರಜೆ ಇದ್ದ ಕಾರಣ ಪರೀಕ್ಷೆ ಬರೆದೆ. ಟೀವಿ ಬರವಣಿಗೆಯ ಸ್ವರೂಪದ ಬಗ್ಗೆ ತಿಳಿವಳಿಕೆ ಇರಲಿಲ್ಲ. ವಾಹಿನಿಯವರು ನನ್ನನ್ನು ನೋಡಿದ ನಂತರ ನಟನೆಗೆ ಆಡಿಷನ್ ನೀಡುವಂತೆ ತಿಳಿಸಿದರು. ಮೂಲತಃ ಪ್ರಯೋಗಶೀಲ ಗುಣದ ನಾನು ನೋಡೋಣ ಎಂದು ಆಡಿಷನ್ ನೀಡಿದೆ. 'ಸೀತಾ ವಲ್ಲಭ'ಕ್ಕೆ ಆಕಸ್ಮಿಕವಾಗಿ ಅವಕಾಶ ಸಿಕ್ಕಿತು. ನಂತರ ತೆಲುಗಿನ ಒಂದು ಕಥೆಗೆ ಬಣ್ಣ ಹಚ್ಚಿದ್ದೆ ಕೋವಿಡ್ ಕಾರಣಕ್ಕೆ ಮತ್ತೆ ಅಲ್ಲಿಗೆ ಹೋಗಲು ಸಾಧ್ಯ ಆಗಲಿಲ್ಲ. 'ಲಾಂಗ್ ಡ್ರೈವ್' ಸಿನಿಮಾ ಮಾಡಿದ್ದೇನೆ. ಅದು ಇನ್ನೇನು ಬಿಡುಗಡೆ ಆಗಬೇಕಿದೆ.

◆ **ಬಣ್ಣದ ಜಗತ್ತಿನ ಅನಿರೀಕ್ಷಿತ ಪ್ರವೇಶದ ಆತಂಕ ಮತ್ತು ಭರವಸೆ ಏನು?**

ಸ್ಪಷ್ಟತೆ ಇದ್ದರೆ ಮಾತ್ರ ನಾನು ನಿರ್ಧಾರವನ್ನು ತೆಗೆದುಕೊಳ್ಳುತ್ತೇನೆ. ಇಂತಹ ಒಂದು ಅವಕಾಶ ಬಂದಿದೆ ಎಂದಾಗ ಪೋಷಕರಲ್ಲಿ ಆತಂಕ ಮೂಡಿತು. ಸಿನಿಮಾ ಕ್ಷೇತ್ರದಲ್ಲಿ ನಮ್ಮ ಕುಟುಂಬ ವಲಯದಲ್ಲಿ ಯಾರೂ ಇಲ್ಲ. ಅಲ್ಲಿ ಹೇಗೋ ಏನೋ ಎನ್ನುವ ಯೋಚನೆ ಅವರನ್ನು ಕಾಡಿತ್ತು. ಇಷ್ಟ ಇದ್ದರೆ ಆ ಕೆಲಸ ಮಾಡುತ್ತೇನೆ. ಇಷ್ಟ ಆಗದಿದ್ದರೆ ಮಾಡುವುದಿಲ್ಲ. ನಿಷ್ಠೂರವಾಗಿಯೇ ನಡೆದುಕೊಳ್ಳುವ ನನಗೆ ಸರಿ ತಪ್ಪುಗಳನ್ನು ಮುಲಾಜಿಲ್ಲದೆ ನಿರ್ಧರಿಸುತ್ತೇನೆ. ಹೀಗಿರುವಾಗ ಇದೇ ಆಗಬೇಕು, ಇದನ್ನೇ ಮಾಡಲೇಬೇಕು ಎಂದು ನಾನು ಹೋಗುತ್ತಿಲ್ಲ. ಅದಾಗಿಯೇ ಅವಕಾಶ ಬಂದಿದೆ ಅದನ್ನು ಗೌರವಿಸುತ್ತೇನೆ. ಸಾಧ್ಯ ಆದರೆ ಮುಂದುವರಿಯುತ್ತೇನೆ. ಸರಿ ಆಗದಿದ್ದ ಪಕ್ಷದಲ್ಲಿ ನನ್ನ ಉದ್ಯೋಗಕ್ಕೆ ಮರಳುತ್ತೇನೆ. ಅದಕ್ಕೆ ಬೇಕಾಗುವ ವಿದ್ಯಾರ್ಹತೆ– ಸಾಮರ್ಥ್ಯ ಎರಡೂ ಇದೆ ಎಂದು ಅವರ ಆತಂಕಕ್ಕೆ ಸಮಾಧಾನದ ಭರವಸೆಯನ್ನು ನಾನು ನೀಡಿದ್ದೆ. ಮೊದಲ ದಿನದ ಶೂಟಿಂಗ್ ಸಂದರ್ಭದಲ್ಲಿ ಪೋಷಕರೂ ಬಂದಿದ್ದರು. ಈಗ ನನಗಿಂತ ಅವರೇ ಖುಷಿಯಾಗಿದ್ದಾರೆ.

◆ **ನಟನಾ ತಾಲೀಮು ಹೇಗೆ ಮಾಡಿದ್ದು?**

ನಟನೆಯ ಮೂಲತತ್ವ ಗೊತ್ತಿರಲಿಲ್ಲ. ಡೈಲಾಗ್ ಹೇಗೆ ಹೇಳಬೇಕು ಎನ್ನುವುದೂ ಕೂಡ. ಸಂಪೂರ್ಣ ಬಿಳಿಯ ಹಾಳೆಯಂತಿತ್ತು ನಟನಾ ಜಗತ್ತು. ಮೊದಲ ದಿನ ಇನ್ನೂ ನೆನಪಿದೆ. ನಿರ್ದೇಶಕರು ಅಳಬೇಕು ಎಂದು ಸೂಚಿಸಿದ್ದರು. ಅಲ್ಲಿಯ ಕೂಗಾಟ ನೋಡಿ ನಿಜಕ್ಕೂ ಅಳ್ತಾ ಇದ್ದೆ. ಅವರು ಬೈಯೋದಕ್ಕೆ ಬೇಜಾರಾಗಿ ಕಣ್ಣೀರು ಬಂದಿತ್ತು. ಅಲ್ಲಿನ ಚಟುವಟಿಕೆಯನ್ನು ಸೂಕ್ಷ್ಮವಾಗಿ ಗ್ರಹಿಸುತ್ತಿದ್ದೆ. ಸಹಜವಾಗಿ ಹೇಗೆ ನಟಿಸಬೇಕು, ಡೈಲಾಗ್ ಹೇಳಬೇಕು ಎನ್ನುವುದನ್ನು ಗಮನಿಸುತ್ತಿದ್ದೆ. ಎಷ್ಟೋ ಬಾರಿ ನನ್ನ ಡೈಲಾಗ್ ಸರಿ ಹೊಂದುತ್ತಿರಲಿಲ್ಲ. ಏಕೆ ಅವರಿಗೆ ಸರಿಯಾಗಲಿಲ್ಲ ಎಂದೂ ಯೋಚಿಸುತ್ತಿದ್ದೆ. ಅಶೋಕ್ ಎನ್ನುವರು ನನ್ನ ತಂದೆ ಪಾತ್ರ ಮಾಡುತ್ತಿದ್ದರು. ಅವರ ಜೊತೆ ಕೆಲವೊಂದು ದೃಶ್ಯಗಳ ಬಗ್ಗೆ ಚರ್ಚಿಸುತ್ತಿದ್ದೆ. ಈಗ ಯಾವುದೇ ಪಾತ್ರವನ್ನಾದರೂ ನಿಭಾಯಿಸಬಲ್ಲೆ ಎನ್ನುವ ಆತ್ಮವಿಶ್ವಾಸ ಮೂಡಿದೆ. ಪಾತ್ರದ ಸ್ವಭಾವವನ್ನು ಅರ್ಥಮಾಡಿಕೊಂಡು ನಮ್ಮಲ್ಲಿ ಅಳವಡಿಸಿಕೊಳ್ಳಬೇಕು. ಪಾತ್ರ ಹೇಗೆ ಮಾತನಾಡುತ್ತೆ ಎನ್ನುವುದನ್ನು ಕಲಿತರೆ ಸುಲಭ ಆಗುತ್ತದೆ.

◆ **ಸಾಮಾಜಿಕ ಜೀವನದಲ್ಲಿ ಯಾವ ರೀತಿಯ ಬದಲಾವಣೆ ಆಗಿದೆ?**

ಹೊರ ಜಗತ್ತಿನಲ್ಲಿ ನನ್ನನ್ನು ಗುರುತಿಸುವವರ ಸಂಖ್ಯೆ ಹೆಚ್ಚಾಗಿದೆ. ತುಂಬ ಪ್ರೀತಿ –ಅಭಿಮಾನವನ್ನು ಜನ ಪ್ರಕಟಿಸುತ್ತಾರೆ. ಅದು ನನಗೂ ಖುಷಿಯನ್ನು ಕೊಡುತ್ತದೆ. ನನ್ನ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಕೆಲಸ ಮಾಡಬೇಕು ಎನ್ನುವ ಹಂಬಲ ಹುಟ್ಟಿಸುತ್ತದೆ. ಕೆಲವೊಮ್ಮೆ ಖಾಸಗಿ ಬದುಕು ಕಡಿಮೆ ಆಯಿತಾ ಎಂದು ಅನಿಸುತ್ತದೆ. ಹೀಗಾಗಿ ನನ್ನ ಖಾಸಗಿತನವನ್ನು ಉಳಿಸಿಕೊಂಡು ಜನರ ಪ್ರೀತಿಯನ್ನು ಪೋಷಿಸಿಕೊಳ್ಳಬೇಕು. ಯಾವುದನ್ನೂ ಕಳೆದುಕೊಳ್ಳಲು ಇಷ್ಟ ಇಲ್ಲ. ಖಾಸಗಿಯಾಗಿ ಹೊರಗಡೆ ಇರಬೇಕಾದ ಸಂದರ್ಭದಲ್ಲಿ ಮಾಸ್ಕ್ ಹಾಕುತ್ತೇನೆ. ನಾನು ಹೇಳುತ್ತಿರುವುದು ಕೋವಿಡ್ ಪೂರ್ವದ ಕಥೆ. ಮತ್ತೆ ಕನ್ನಡಕ ಬಳಸುತ್ತೇನೆ. ಮೇಕಪ್ ಕೂಡ ಇರುವುದಿಲ್ಲ. ಆಗ ಸುಲಭಕ್ಕೆ ನನ್ನನ್ನು ಗುರುತಿಸಲು ಆಗುವುದಿಲ್ಲ.

◆ **ಸರಸೂ ಬಗ್ಗೆ ಹೇಳುವುದಾದರೆ....**

ಸೀತಾ ವಲ್ಲಭ ಮುಗಿಯುತ್ತಿದ್ದಂತೆ, ಈ ಪಾತ್ರಕ್ಕೆ ಫೋನ್ ಬಂದಿತ್ತು. ಈ ಪಾತ್ರ ಏಕೆ ಇಷ್ಟ ಆಯಿತು ಅಂದರೆ. ಸರಸೂ ಓದಬೇಕು ಎನ್ನುವ ಹುಚ್ಚಿರುವ ಹುಡುಗಿ. ವೈಯಕ್ತಿಕವಾಗಿ ಓದಿಗೆ ಮಹತ್ವವನ್ನು ಕೊಡುತ್ತೇನೆ. ಯಾರೇ ಆದರೂ ತಮ್ಮ ಅಸ್ತಿತ್ವಕ್ಕಾಗಿ ಓದಲೇಬೇಕು. ನಾನು ಓದುವವರನ್ನು ಬೆಂಬಲಿಸುತ್ತೇನೆ. ಸರಸೂಗೆ ವೈದ್ಯ ಆಗಬೇಕು ಎನ್ನುವುದು ಕನಸು. ಸಮಾಜ ಸೇವೆಗಾಗಿ ತನ್ನ ವೃತ್ತಿ ಮೀಸಲಿಡಬೇಕು ಎಂದುಕೊಳ್ಳುತ್ತಾಳೆ. ಕುಟುಂಬದಲ್ಲಿ ಅದಕ್ಕೆ ವಿರೋಧ ವ್ಯಕ್ತವಾಗುತ್ತದೆ. ಅದೆಲ್ಲವನ್ನೂ ಮೀರಿ ತನ್ನ ಕನಸನ್ನು ಹೇಗೆ ಈಡೇರಿಸಿಕೊಳ್ಳುತ್ತಾಳೆ ಎನ್ನುವುದೇ ಕಥೆಯ ಹೂರಣ. ಇದು ಸಮಾಜಕ್ಕೆ ಒಳ್ಳೆಯ ಸಂದೇಶವನ್ನು ನೀಡಬಲ್ಲ ಪಾತ್ರ ಎಂದು ನನಗನಿಸಿದೆ. ಓದಿನ ಬಗ್ಗೆ ಹಲವರಿಗೆ ಇದು ಸ್ಫೂರ್ತಿಯನ್ನು ತುಂಬುತ್ತದೆ.

■ **ರಾಘವೇಂದ್ರ ಕೆ.**